

# ಟೀಸರ್‌ಗೆ ಹೋದ ಮಾನ...



‘ಕೆ.ಜಿ.ಎಫ್. 2’ ಸಿನಿಮಾದ ಟೀಸರ್ ಬಿಡುಗಡೆಯಾಗಿ ದಾಖಲೆಯ ವ್ಯೂಸ್ ಗಳಿಸಿದ್ದು, ನಂತರ ಅದರಲ್ಲಿನ ದೃಶ್ಯವೊಂದವನ್ನು ತೆಗೆದುಹಾಕುವಂತೆ ಆರೋಗ್ಯ ಇಲಾಖೆ ಸೂಚಿಸಿದ್ದೆಲ್ಲವೂ ಗೊತ್ತಿರುವ ಸುದ್ದಿ. ಆದರೆ ಕನ್ನಡದ ಮಾಧ್ಯಮಗಳಲ್ಲಿ, ಹೊಗಳುಭಟ ವೆಬ್‌ಸೈಟ್‌ಗಳಲ್ಲಿ, ಫೇಸ್‌ಬುಕ್ ಪೇಜ್‌ಗಳಲ್ಲಿ ಅಷ್ಟಾಗಿ ಸದ್ದುಮಾಡದ ಇನ್ನೊಂದು ಸುದ್ದಿಯಿದೆ. ಅದು ನೇರವಾಗಿ ಈ ಚಿತ್ರಕ್ಕೆ ಸಂಬಂಧಿಸಿದ್ದೇನಲ್ಲ. ಆದರೆ ಸ್ಟಾರ್‌ನಟರ ಅಭಿಮಾನಿಬಳಗವೆಂದು ಹೇಳಿಕೊಳ್ಳುವವರ ಇನ್ನೊಂದು ಮುಖವನ್ನು ಅನಾವರಣಗೊಳಿಸುವಂಥದ್ದು.

ಧ್ರುವ್ ರಾಠಿ ಜನಪ್ರಿಯ ಯೂಟ್ಯೂಬರ್‌ಗಳಲ್ಲಿ ಒಬ್ಬರು. ಅವರು ಸಿನಿಮಾಗಳು, ಟೀಸರ್‌ಗಳನ್ನು ತುಸು ವ್ಯಂಗ್ಯವಾಗಿ ವಿಮರ್ಶಿಸುತ್ತಾರೆ. ಇತ್ತೀಚೆಗಷ್ಟೇ ಬಿಡುಗಡೆಯಾದ ‘ಕೆ.ಜಿ.ಎಫ್ 2’ ಸಿನಿಮಾದ ಟೀಸರ್ ಬಗ್ಗೆಯೂ ಅವರು ಒಂದು ವಿಡಿಯೊ ಮಾಡಿ ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆ ಮಾಡಿದ್ದರು. ಆ ಸಿನಿಮಾದ ತಾಂತ್ರಿಕತೆಯ ಬಗ್ಗೆ ಮೆಚ್ಚುಗೆಯ ಮಾತನಾಡಿದ್ದ ಅವರು ಅದರಲ್ಲಿನ ಒಂದು ದೃಶ್ಯದ ಬಗ್ಗೆ ಹಾಸ್ಯಮಾಡಿದ್ದರು. ಆದರೆ ಅದಕ್ಕಾಗಿ ಅವರು ಎದುರಿಸಿದ ಪ್ರತಿಕ್ರಿಯೆಗಳು ಮಾತ್ರ ಅವರ ಮುಖದಲ್ಲಿನ ನಗುವನ್ನು ಮರೆಸಿತ್ತು. ಅವರಷ್ಟೇ ಅಲ್ಲ, ಸೋಷಿಯಲ್ ಮೀಡಿಯಾ ಮೂಲಕ ಧ್ರುವ್ ಅವರ ಗೆಳತಿ ಜೂಲಿ ಅವರಿಗೆ ಅತ್ಯಾಚಾರದ, ಕೊಲೆಯ ಬೆದರಿಕೆಗಳು ಬರತೊಡಗಿದ್ದವು. ಎರಡು ದಿನಗಳ ನಂತರವೂ ಈ ಸೋಷಿಯಲ್ ಮೀಡಿಯಾದ ಅಭಿಮಾನದ ದಾಳಿ ಮುಂದುವರಿದಾಗ ಧ್ರುವ್, ‘ಕೆ.ಜಿ.ಎಫ್ 2’ ಸಿನಿಮಾದ ಬಗೆಗಿನ ತಮ್ಮ ವಿಡಿಯೊವನ್ನು ಡಿಲೀಟ್ ಮಾಡಿದ್ದಾರೆ. ಅಷ್ಟೇ ಅಲ್ಲ, ‘ನಾನ್ಯಾಕೆ ಹಿಂದಿನ ವಿಡಿಯೊವನ್ನು ಡಿಲೀಟ್ ಮಾಡಿದ್ದೇನೆ’ ಎಂಬುದನ್ನು ವಿವರಿಸುವುದಕ್ಕೋಸ್ಕರವೇ ಇನ್ನೊಂದು ವಿಡಿಯೊ ಮಾಡಿ ಪ್ರಕಟಿಸಿದ್ದಾರೆ (bit.ly/2LYw8Ws). ಅವರ ಈ ವಿಡಿಯೊವನ್ನು ಒಂದೇ ದಿನದಲ್ಲಿ 7.37 ಲಕ್ಷ ಜನರು ನೋಡಿದ್ದಾರೆ. ಮೂವತ್ತೆರಡು ಸಾವಿರಕ್ಕೂ ಅಧಿಕ ಜನರು ಕಮೆಂಟ್ ಮಾಡಿದ್ದಾರೆ.



ಧ್ರುವ್ ರಾಠಿ

ಈ ಘಟನೆಯನ್ನು ಕನ್ನಡ ಸಿನಿಮಾದ ಹೆಮ್ಮೆಯ ಗುರುತಾಗಿ ಹೇಳಿಕೊಳ್ಳುವವರ ಸಂಖ್ಯೆಗೇನೂ ಕಮ್ಮಿಯಿಲ್ಲ. ದಕ್ಷಿಣ ಭಾರತದ ಸಿನಿಮಾದ ಬಗೆಗಿನ ಉತ್ತರ ಭಾರತೀಯರ ಉಪೇಕ್ಷೆಗೆ ಸರಿಯಾಗಿ ಬಿಸಿ ಮುಟ್ಟಿಸಿದ ಘಟನೆಯನ್ನಾಗಿ ನೋಡುವವರೂ ಇದ್ದಾರೆ. ಆದರೆ ಆ ಸಮಸ್ಯೆಗಳನ್ನು ಎದುರಿಸಲು ಅನುಸರಿಸಿದ ಈ ‘ಕ್ರೂರ ಆಕ್ರಮಣ’ವನ್ನು ಮೆಚ್ಚಿಕೊಳ್ಳುವುದೆಂದರೆ ಅತ್ಯಾಚಾರ, ಕೊಲೆ ಮನಸ್ಥಿತಿಯ ವಿಕೃತಿಯನ್ನು ಒಪ್ಪಿಕೊಂಡಂತಾಗುತ್ತದಷ್ಟೆ. ತನಗೆ ಎದುರಾದ ಟೀಕೆಯನ್ನೂ ಸ್ಥಿಮಿತ ಮನಸ್ಥಿತಿಯಿಂದಲೇ ಎದುರಿಸುವುದು, ಹೆಣ್ಣನ್ನು ಗೌರವದಿಂದ ನೋಡುವುದು ಈ ನೆಲದ ಗುಣ ಎಂದು ಒಪ್ಪಿಕೊಳ್ಳುವ ಯಾರೂ ಈ ಕೃತ್ಯವನ್ನು ಬೆಂಬಲಿಸುವುದು ಸಾಧ್ಯವಿಲ್ಲ. ತನ್ನ ಪರಿಸರ ರಕ್ಷಣೆಯ ಚಟುವಟಿಕೆಗಳ ಮೂಲಕ ಸೂಕ್ಷ್ಮ ಸಂವೇದನೆಯ ನಟ ಎಂದು ಗುರ್ತಿಸಿಕೊಂಡಿರುವ ‘ಕೆ.ಜಿ.ಎಫ್ 2’ ಸಿನಿಮಾದ ನಾಯಕನಟ ಯಶ್ ಅವರೇ ತಮ್ಮ ಅಭಿಮಾನಿಗಳಿಗೆ ಮನುಷ್ಯತ್ವದ ಪಾಠ ಹೇಳಿದರೆ ಕನ್ನಡದ ಗೌರವ ತುಸುವಾದರೂ ಉಳಿದೀತು. ಇಲ್ಲವಾದರೆ ‘ಟೀಸರ್‌ಗೆ ಹೋದ ಮಾನ ಸಿನಿಮಾ ಕೊಟ್ಟರೂ ಬಾರದು’.

# ಕೌಟಿಲ್ಯನ ನಕಲುಶಾಸ್ತ್ರ!

ಪ್ರಾಚೀನ ಭಾರತದ ಮಹತ್ವದ ಅರ್ಥಶಾಸ್ತ್ರಜ್ಞ, ಕೌಟಿಲ್ಯನ ಹೆಸರಿನಲ್ಲಿ ಒಂದು ಸಿನಿಮಾ ಕನ್ನಡದಲ್ಲಿಯೇ ತಯಾರಾಗುತ್ತಿರುವುದು ಸುದ್ದಿಯಾಗಿತ್ತು. ಈ ಸಿನಿಮಾಕ್ಕೆ ಪ್ರಭಾಕರ್ ಶೇರ್‌ಖಾನೆ ಎಂಬುವವರು ಆಕ್ಷನ್ ಕಟ್ ಹೇಳಿದ್ದಾರೆ.

ಚಿತ್ರದ ಕೆಲವು ಭಿನ್ನ ಮತ್ತು ಆಕರ್ಷಕ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿಯೂ ಸಾಕಷ್ಟು ಸುದ್ದಿಮಾಡಿದ್ದವು. ಈಗ ಅದೇ ಪೋಸ್ಟರ್‌ಗಳು ಮತ್ತೆ ಸುದ್ದಿ ಮಾಡುತ್ತಿವೆ. ಅದಕ್ಕೆ ಕಾರಣ ಆ ‘ಭಿನ್ನತೆ’ಯ ಮೂಲ!

ಕನ್ನಡ ಚಿತ್ರರಂಗದಲ್ಲಿ ಹೆಜ್ಜೆ ಹೆಜ್ಜೆಗೂ ‘ಇನ್ ಸ್ಪಿರೇಷನ್ ವ್ಯಾಧಿ’ ಪೀಡಿತರು ಸಿಗುತ್ತಾರೆ. ಸ್ಫೂರ್ತಿಯ ಹೆಸರಿನಲ್ಲಿ ಯಥಾವತ್ತು ನಕಲು ಮಾಡುವುದು ಈ ವ್ಯಾಧಿಯ ಮುಖ್ಯ ಲಕ್ಷಣ. ಇದು ಬರೀ ಸಿನಿಮಾ ಕಥೆಗಷ್ಟೇ ಅಲ್ಲ, ಚಿತ್ರದ ಪೋಸ್ಟರ್‌ಗಳಿಗೂ ಅನ್ವಯಿಸುತ್ತದೆ. ‘ಮುನಿರತ್ನ ಕುರುಕ್ಷೇತ್ರ’ದಂಥ ‘ದೊಡ್ಡವರೇ’ ಬಾಹುಬಲಿಯ






ಪೋಸ್ಟರ್‌ನಿಂದ ಸ್ಫೂರ್ತಿಯ ಸೆಳೆತಕ್ಕೆ ಒಳಗಾಗಿದ್ದರು. ಇನ್ನು ಸಣ್ಣ ಬಜೆಟ್‌ನಲ್ಲಿ ಸಿನಿಮಾ ಮಾಡಿ ಪ್ರತಿಭೆ ಸಾಬೀತು ಪಡಿಸಲು ಹೆಣಗುತ್ತಿರುವವರು ಇದರಲ್ಲಿ ಹಿಂದೆ ಬೀಳುತ್ತಾರೆಯೇ?

‘ಕೌಟಿಲ್ಯ’ ಚಿತ್ರತಂಡವೂ ಸ್ಫೂರ್ತಿಯ ಸೆಲೆ ಹುಡುಕಿಕೊಂಡಿದೆ. ಅದರ ಹುಡುಕಾಟಕ್ಕಾಗಿ ಅದು 1973ರಲ್ಲಿ ಬಿಡುಗಡೆಯಾದ ಅಮೆರಿಕನ್ ಸಿನಿಮಾ ‘ಮೀನ್ ಸ್ಟ್ರೀಟ್’ವರೆಗೂ ಮಣ್ಣು ಅಗೆದಿದೆ.

ಎರಡೂ ಚಿತ್ರಗಳ ಪೋಸ್ಟರ್‌ಗಳು ಇಲ್ಲಿವೆ. ಪೋಸ್ಟರ್‌ನಲ್ಲಿಯೇ ಇಷ್ಟೊಂದು ಭಿನ್ನವಾಗಿ ಸ್ಫೂರ್ತಿಗೊಂಡವರು, ಸಿನಿಮಾದಲ್ಲಿ ಇನ್ನು ಎಲ್ಲೆಲ್ಲಿಂದ ಸ್ಫೂರ್ತಿಶಕ್ತಿಯನ್ನು ಪಡೆದಿರುತ್ತಾರೋ ಎಂದು ಗಾಂಧಿನಗರದ ಹರಟೆಕಟ್ಟೆಯ ಹುಡುಗರು ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಾರೆ.